ನೋಡಿಕೊಳ್ಳುತ್ತೇನೆ. ನೀನು ಹೇಗೆ ಜೀವಂತವಾಗಿರುತ್ತೀಯೋ ನೋಡುತ್ತೇನೆ' ಎಂದುಕೊಳ್ಳುತ್ತಾ ಮಳೆಯಲ್ಲಿಯೇ ನಡೆದುಕೊಂಡು ಹೊರಟುಹೋದ.

ಇಬ್ಬರು ಗಂಡಸರು ಗರ್ಭಿಣಿಯನ್ನು ಎತ್ತಿಕೊಂಡು ಕಾರಿನಲ್ಲಿ ಕೂರಿಸಿದರು. ಆಕೆಯೊಂದಿಗೆ ಅವಳ ತಾಯಿಯೂ ಕುಳಿತಳು. ನೋವು ಹೆಚ್ಚಾದಂತಿದೆ. ಇನ್ನೂ ಜೋರಾಗಿ ಕಿರುಚಲಾರಂಭಿಸಿದಳು. ಕಾರಿನಲ್ಲಿ ಕುಳಿತ ನಂತರ ತಾಯಿಗೆ ಸ್ವಲ್ಪ ಧೈರ್ಯ ಬಂದಂತಿದೆ. ತಾನು ಅಳುವುದನ್ನು ನಿಲ್ಲಿಸಿ ಮಗಳಿಗೆ ಧೈರ್ಯ ಹೇಳುತ್ತಿದ್ದಾಳೆ. ಉಳಿದವರು ಹತ್ತುವುದಾ ಬೇಡವಾ ಎಂದು ಹಿಂದೆಮುಂದೆ ಯೋಚಿಸುತ್ತ ಮಳೆಯಲ್ಲಿ ನೆನೆಯುತ್ತ ನಿಂತಿದ್ದಾರೆ. ಅವರಿಗೆ ಹತ್ತುವಂತೆ ಹೇಳಿ ಕಾರ್ ಡ್ರೈವ್ ಮಾಡತೊಡಗಿದನು ಬೊಂದಯ. ಊರು ದಾಟುವವರೆಗೂ ಬಾಲಯ್ಯ ಯಾರನ್ನಾದರೂ ಕರೆದುಕೊಂಡು ಬಂದು ಅಡ್ಡಿಪಡಿಸುತ್ತಾನೇನೋ ಎಂದು ಭಯವಿತ್ತು ಅವನಿಗೆ. ಊರು ದಾಟಿದ ನಂತರ ವೇಗವಾಗಿ ಹೋಗತೊಡಗಿದ.

ಒಂದು ಕಡೆ ಗರ್ಭಿಣಿಯ ಚೀರಾಟ, ಮತ್ತೊಂದು ಕಡೆ ಮಳೆ ಎರಡೂ ಹೆಚ್ಚಾಗುತ್ತಲೇ ಇದೆ. ಎಷ್ಟೇ ಎಚ್ಚರಿಕೆಯಿಂದ ಕಾರು ಚಲಾಯಿಸುತ್ತಿದ್ದರೂ ಉಬ್ಬುತಗ್ಗುಗಳ ಬಳಿ ಎತ್ತಿ ಕುಕ್ಕುತ್ತಿದೆ. ಕಿರುಚಾಟ ಕೇಳುತ್ತಿದ್ದರೆ ಕಾರಿನಲ್ಲೇ ಸತ್ತುಹೋಗುವಳೇನೋ ಎಂದು ಭಯ ಶುರುವಾಯಿತು ಬೊಂದಯನಿಗೆ. ಬರುವಾಗ ಇದ್ದಷ್ಟು ಸಲೀಸಾಗಿಲ್ಲ ಪ್ರಯಾಣ. ಎಲ್ಲಾರೆಡ್ಡಿಪೇಟೆಗೆ ಸೇರಿಕೊಳ್ಳುವಷ್ಟರಲ್ಲಿ ಅರ್ಧಗಂಟೆ ಪ್ರಯಾಣ ಒಂದು ಗಂಟೆ ಹಿಡಿಯಿತು. ಆದರೆ ಆಸ್ಪತ್ರೆಯಲ್ಲಿ ಡಾಕ್ಟರ್ ಇರಲಿಲ್ಲ. ಎಲ್ಲರಿಗೂ ಎದೆಯ ಮೇಲೆ ಕಲ್ಲುಬಿದ್ದಂತಾಯಿತು. ಬೊಂದಯನಿಗೆ ಎದೆ ಧಸಕ್ಕೆಂದಿತು. ಇಲ್ಲಿ ಇಳಿಸಿ ಕೂಡಲೇ ಹೊರಡೋಣವೆಂದುಕೊಂಡನು. ಆ ವೇಳೆಗಾಗಲೇ ಸೀಟೆಲ್ಲ ರಕ್ತದಿಂದ ಒದ್ದೆಯಾಗಿತ್ತು. ಕೂಗಾಡಿ, ಕೂಗಾಡಿ ಆಕೆ ನಿಶ್ಯಕ್ತಳಾಗಿದ್ದಳು. ಯೋಚಿಸುವಷ್ಟು ಸಮಯವೂ ಇರಲಿಲ್ಲ, ಕೂಡಲೇ ಸಿರಿಸಿಲ್ಲಕ್ಕೆ ಕರೆದುಕೊಂಡು ಹೋದನು. ದಾರಿಯಲ್ಲಿ ಮುರಿದು ಬಿದ್ದ ಮರಗಳು ಕಿತ್ತುಹೋದ ರಸ್ತೆ ದಾಟಿಕೊಂಡು ಸಿವಿಲ್ ಆಸ್ಪತ್ರೆಗೆ ಸೇರುವ ವೇಳೆಗೆ ಮತ್ತೆ ಒಂದು ಗಂಟೆ ಹಿಡಿಯಿತು.

ಅಲ್ಲಿ ವೈದ್ಯರಿದ್ದರು, ಕೂಡಲೇ ಒಳಗೆ ಕರೆದುಕೊಂಡು ಹೋದರು. ಎಲ್ಲರೂ ಒಳಕ್ಕೆ ಹೋದರು. ಬೊಂದಯ ಮಾತ್ರ ಭಯ ಮತ್ತು ಬಳಲಿಕೆಯಿಂದ ಅಲ್ಲಿಯೇ ಕುಳಿತನು. ದೊರೆ ದೊರೆಸಾನಿ ಯಾರೂ ನೆನಪಿಗೆ ಬರುತ್ತಿಲ್ಲ. ಹೆರಿಗೆಯಾಗದೆ ಒದ್ದಾಡಿದ ಆಕೆ, ಮಗಳಿಗೋಸ್ಕರ ಬಾಯಿಬಾಯಿ ಬಡಿದುಕೊಂಡ ತಾಯಿ ಇವರೇ ಕಾಣುತ್ತಿದ್ದಾರೆ. ಏನಾಗುತ್ತದೋ ಎಂದು ಆತಂಕದಿಂದ ಎದುರುನೋಡುತ್ತಿದ್ದಾನೆ. ಅರ್ಧ ಗಂಟೆಯಲ್ಲಿ ಕಂದಮ್ಮನ ಅಳುವು ಕೇಳಿಸಿತು. ಕಿರುಚಿ, ಕಿರುಚಿ ನಿಂತ ಆಕೆಯ ಕೂಗಾಟದಂತೆಯೇ ಆಕಾಶವೂ ಶಾಂತವಾಗಿದೆ.

'ಗಂಡು ಮಗು... ಗಂಡು ಮಗು' ಯಾರೋ ಸಂಭ್ರಮದಿಂದ ಹೇಳುತ್ತಿದ್ದಾರೆ.

ಆ ಮಾತು ಕೇಳುತ್ತಲೇ ಬೊಂದಯನಿಗೆ ಬಳಲಿಕೆಯೆಲ್ಲಾ ಸರ್ರನೆ ಇಳಿಯಿತು. ಖುಷಿಯಿಂದ ಎದ್ದು ನಿಂತನು. ಆಗ ನೆನಪಿಗೆ ಬಂದರು ದೊರೆ, ದೊರೆಸಾನಿ, ಬಾಲಯ್ಯ... ಬಂದ ಕೆಲಸ. ಮುಂದಕ್ಕೆ ಹೆಜ್ಜೆ ಹಾಕತೊಡಗಿದ ಕೂಡಲೇ ಯಾರೋ ಕರೆದಂತಾಗಿ ಹಿಂತಿರುಗಿದನು ಬೊಂದಯ. ಆಕೆಯ ತಾಯಿ ಹಸುಗೂಸನ್ನು ಎತ್ತಿಕೊಂಡು ಸರಸರನೆ ಬಂದಳು. ಬೊಂದಯನ ಕಾಲಮೇಲೆ ಇಟ್ಟು ಕಣ್ಣೀರು ಸುರಿಸುತ್ತ, 'ದೇವರಂತೆ ಬಂದೆ ಮಗನೇ' ಎಂದಳು. ಮಗುವನ್ನು ಆಶೀರ್ವದಿಸಿ ಮುಂದೆ ನಡೆದನು ಬೊಂದಯ.

ಹೋಗುತ್ತಿದ್ದರೆ, 'ಮಗನೇ... ನಿನ್ನ ಹೆಸರೇನು...' ಕೇಳಿದಳು ತಾಯಿ.

'ಬೊಂದಯ... ಸಾಯುತ್ತಿದ್ದವನು ಬದುಕಿದೆನಂತೆ. ಅದಕ್ಕೇ ಆ ಹೆಸರು ಇಟ್ಟರಂತೆ' ಎನ್ನುತ್ತ ಕಾರಿನ ಬಳಿ ಬಂದನು.